**ಓ.ಎಸ್.ನಂ.251/2017**

ಪಿ.ಡಬ್ಲ್ಯೂ:1

**ದಿನಾಂಕಃ04.09.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿ.ಸಿ.ವಕೀಲರಿಂದಃ**

ಪ್ರತಿವಾದಿ ನನಗೆ 13 ವರ್ಷಗಳಿಂದ ಪರಿಚಯ. ಪ್ರತಿವಾದಿ ಗಂಡನ ಹೆಸರು ಷರೀಫ್ ಎಂದಾಗಿರುತ್ತದೆ. ದಾವಾ ಸ್ವತ್ತು ನನ್ನ ಗಂಡ ಲಕ್ಷಣ ಬಿನ್ ಚೌಡಪ್ಪ ರವರಿಗೆ 20 ವರ್ಷಗಳ ಹಿಂದೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಯಾವ ಸಾಲಿನಲ್ಲಿ ಮಂಜೂರಾಗಿದೆ ಎಂದು ನಿಖರವಾಗಿ ಗೊತ್ತಿಲ್ಲ. ನನ್ನ ಗಂಡನಿಗೆ ಮಂಜೂರಾಗಿದ್ದ ಆಸ್ತಿಯ ವಿಸ್ತೀರ್ಣ 26X30 ಅಡಿ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಮ್ಮ ಗಂಡನಿಗೆ

ಪಿ.ಡಬ್ಲ್ಯೂ:1

ಸರ್ಕಾರದವರು ಹಕ್ಕು ಪತ್ರ ನೀಡಿದ್ದಾರ? ಅಂದರೆ ಸಾಕ್ಷಿಯು ಹಕ್ಕು ಪತ್ರ ನೀಡಿದ್ದರು, ಪ್ರತಿವಾದಿಗಳು ದಾವಾ ಆಸ್ತಿಗೆ ವಿದ್ಯುತ್ ಸಂಪರ್ಕ ಪಡೆಯವ ಉದ್ದೇಶದಿಂದ ನಮ್ಮಿಂದ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮಂಜೂರಾದ 2 ವರ್ಷಗಳ ನಂತರ ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸಿರುತ್ತೇವೆ. ಮನೆ ನಿರ್ಮಾಣ ಮಾಡಲು ಯಾವುದೇ ಪರವಾನಗಿ ಪಡೆದಿರುವುದಿಲ್ಲ. ನನ್ನ ಗಂಡ ಮೃತಪಟ್ಟು 13 ವರ್ಷಗಳಾಗಿರುತ್ತವೆ. ಯಾವ ಸಾಲಿನಲ್ಲಿ ಮೃತಪಟ್ಟಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ಪ್ರತಿವಾದಿಗೆ ದಾವಾ ಆಸ್ತಿಯನ್ನು ಬಾಡಿಗೆ ಕೊಡುವ ಕಾಲಕ್ಕೆ ನನ್ನ ಗಂಡ ಜೀವಂತ ಇರಲಿಲ್ಲ. ಪ್ರತಿವಾದಿಗೆ ದಾವಾ ಆಸ್ತಿಯನ್ನು ಬಾಡಿಗೆ ಕೊಟ್ಟಿರುವ ಬಗ್ಗೆ ಬರವಣಿಗೆಯಾಗಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯೊಂದಿಗೆ ಬಾಡಿಗೆ ಒಪ್ಪಂದ ಮಾಡಿಕೊಂಡಿರುತ್ತೇವೆ. ಬಾಡಿಗೆ ಮಾತುಕತೆ ಆಗುವ ಸಮಯದಲ್ಲಿ ನಾನು ಮತ್ತು ಪ್ರತಿವಾದಿ ಇಬ್ಬರೇ ಇದ್ದೆವು. ನಮ್ಮ ತಂದೆ-ತಾಯಿ ಮನೆ ಬೀರೂರಿನಲ್ಲಿರುತ್ತದೆ. ನನ್ನ ತಂದೆ-ತಾಯಿಗೆ ನಾನು ಮತ್ತು ನನ್ನ ಅಣ್ಣ ಇಬ್ಬರೇ ಮಕ್ಕಳು. ನನ್ನ ಅಣ್ಣ ಮೃತಪಟ್ಟಿದ್ದು, ಅವರ ಹೆಂಡತಿ ಮಕ್ಕಳು ಇರುತ್ತಾರೆ. ನನ್ನ ಗಂಡನ ಊರು ಬೀರೂರು. ನನ್ನ ಗಂಡನೊಂದಿಗೆ ಅವರ ಒಬ್ಬ ಸಹೋದರ ಬೀರಪ್ಪ ಎಂಬುವವರು ಇದ್ದರು. ಸದರಿ ಬೀರಪ್ಪ ನವರು ಈಗ ಜೀವಂತ ಇರುತ್ತಾರೆ. ನಾನು ದಾವಾ ಆಸ್ತಿಗೆ ಮಾಲೀಕಳಲ್ಲ ಅಂದರೆ ಸರಿಯಲ್ಲ. ನಾನು ಮಾಲೀಕಳಲ್ಲದ ಕಾರಣ ಪ್ರತಿವಾದಿ ನನ್ನಿಂದ ದಾವಾ ಆಸ್ತಿಯನ್ನು ಬಾಡಿಗೆ ಪಡೆದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡ ಲಕ್ಷ್ಮಣ ರವರು ದಿ:21.05.1999 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ ಗಂಡ ಷರೀಫ್ ಅವರಿಗೆ ಕ್ರಯ ಒಪ್ಪಂದದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರದಂತೆ ಕ್ರಯದ ಒಟ್ಟು ಮೊತ್ತ ರೂ.13,000/-ಗಳನ್ನು ಷರೀಫ್ ಅವರಿಂದ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡು ನೋಟರಿಯವರ ಮುಂದೆ ನನ್ನ ಗಂಡ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಆ ದಿನ ನಾನು ಮತ್ತು ನನ್ನ ಗಂಡ ಕ್ರಯದ ಕರಾರಿನಂತೆ ಸಂಪೂರ್ಣ ಕ್ರಯದ ಮೊತ್ತವನ್ನು ಸ್ವೀಕರಿಸಿ ನನ್ನ ಗಂಡ ಸಹಿ ಮಾಡಿದ್ದು, ನಾನು ಹೆಬ್ಬೆಟ್ಟಿನ ಗುರುತು ಹಾಕಿದ್ದು, ದಾವಾ ಆಸ್ತಿಯ ಸ್ವಾಧೀನವನ್ನು

ಪ್ರತಿವಾದಿ ಗಂಡ ಷರೀಫ್ ಅವರಿಗೆ ಹಸ್ತಾಂತಸಿರುತ್ತೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ಕಾರದಿಂದ ಮಂಜುರಾಗಿದ್ದು, ಮಂಜೂರಾತಿ ಷರತ್ತಿನಲ್ಲಿ 20 ವರ್ಷಗಳು ಪರಭಾರೆ ಮಾಡಕೂಡದು ಎಂದು ಷರತ್ತು ಇರುವ ಕಾರಣ ಕ್ರಯಪತ್ರ ನೊಂದಣಿ ಮಾಡಿಸಲು ಆಗದೇ ಇರುವ ಕಾರಣ ದಾವಾ ಆಸ್ತಿಯ ದಾಖಲೆಯನ್ನು ಮತ್ತು ಸ್ವಾಧೀನವನ್ನು ಕ್ರಯದ ಕರಾರಿನಂತೆ ಪ್ರತಿವಾದಿಗಳಿಗೆ ನೀಡಿರುತ್ತೇವೆ ಅಂದರೆ ಸರಿಯಲ್ಲ. ಅದೇ ದಿನ ಕ್ರಯದ ಕರಾರು ಪತ್ರ ಆದ ದಿನವೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಗಂಡ ಪ್ರತಿವಾದಿಗೆ ಜಿಪಿಎ ಬರೆದುಕೊಟ್ಟಿರುತ್ತೇವೆ ಅಂದರೆ ಸರಿಯಲ್ಲ.

ಕ್ರಯದ ಕರಾರಿನಂತೆ ದಾವಾ ಆಸ್ತಿಯ ಸ್ವಾಧೀನ ಪಡೆದುಕೊಂಡಿದ್ದ ಪ್ರತಿವಾದಿಯ ಗಂಡ ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸಿಲ್ಲ ಅಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ದಾವಾ ಆಸ್ತಿಯನ್ನು ಬಾಡಿಗೆಗೆ ಕೊಡದಿದ್ದರೂ ಸಹ ದಾವಾ ಆಸ್ತಿ ಖಾತೆ ನನ್ನ ಗಂಡನ ಹೆಸರಿನಲ್ಲಿ ಇದ್ದ ಕಾರಣ ಪ್ರತಿವಾದಿಗೆ ಹಣದ ಬೇಡಿಕೆ ಇಟ್ಟು ಅವರು ಹಣ ಕೊಡದೇ ಇದ್ದಾಗ ಈ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ನಿರ್ಮಾಣ ಮಾಡಿದ ನಂತರ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತೇನೆ. ದಾವಾ ದಾಖಲು ಮಾಡುವ ಉದ್ದೇಶದಿಂದ ಮತ್ತು ನನ್ನ ಗಂಡನ ಹೆಸರಿನಲ್ಲಿ ಖಾತೆ ಇರುವುದರಿಂದ ದಾವಾ ದಾಖಲಿಸುವ ಸಮಯದಲ್ಲಿ ಮಾತ್ರ ಕಂದಾಯ ಪಾವತಿ ಮಾಡಿದ್ದು, ಹಿಂದೆ ಯಾವುದೇ ನಾನು ಕಂದಾಯ ಪಾವತಿ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ-9 ಮತ್ತು 10ರ ಛಾಯಾಚಿತ್ರದಲ್ಲಿ ಕಾಣುವ ಮನೆಗೆ ನಾನು ಮಾಲೀಕಳಲ್ಲ ಅಂದರೆ ಸರಿಯಲ್ಲ. ನಿಪಿ-1 ರಿಂದ 10ರ ದಾಖಲೆಗಳನ್ನು ಈ ದಾವೆಗಾಗಿ ಸೃಷ್ಠಿಸಲಾಗಿದೆ ಅಂದರೆ ಸರಿಯಲ್ಲ. ಪ್ರತಿವಾದಿ ಗಂಡ ದಾವಾ ಆಸ್ತಿಯ ಮಾಲೀಕರು ಅಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನನ್ನ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಬಾಡಿಗೆ ವ್ಯವಹಾರ ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಪ್ರತಿವಾದಿ ಗಂಡ ಷರೀಫ್ ಆಗಿದ್ದರೂ ಸಹ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಈ ದಾವೆಯ ಸಮನ್ಸ್ ಪ್ರತಿವಾದಿಗೆ ಜಾರಿಯಾದಾಗ ಪ್ರತಿವಾದಿ ಗಂಡ ಷರೀಫ್ ನನ್ನೊಂದಿಗೆ ಮಾತನಾಡಿದ್ದು, ಸಾಕ್ಷಿಗಳ ಸಮಕ್ಷಮ ಈ ದಾವೆಯನ್ನು ವಾಪಸ್ಸು ಪಡೆಯುತ್ತೇನೆ ಎಂದು ತಿಳಿಸಿದ್ದೆ ಅಂದರೆ ಸರಿಯಲ್ಲ.

**ಓ.ಎಸ್.ನಂ.251/2017**

ಪಿ.ಡಬ್ಲ್ಯೂ:1

ದಿ:01-10-2008 ರಂದು ದಾವಾ ಆಸ್ತಿಗೆ ವಿದ್ಯುತ್ ಸಂಪರ್ಕ ಪಡೆಯಲು ದಾವಾ ಆಸ್ತಿ ದಾಖಲೆಗಳು ಪ್ರತಿವಾದಿಗೆ ನೀಡಲಾಗಿದೆಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ದಿ:01.10.2008 ರಂದು ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾಸಿಕ ರೂ.300/- ರಂತೆ ಬಾಡಿಗೆಗೆ ನೀಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ದಿ:01.10.2015 ರಂದು ದಾವಾ ಆಸ್ತಿಯ ಮಾಸಿಕ ಬಾಡಿಗೆ ರೂ.500/- ಎಂದು ನಿಗದಿಪಡಿಸಲಾಗಿದ್ದು, ಅದಕ್ಕೆ ಪ್ರತಿವಾದಿ ಒಪ್ಪಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ಯಾವುದೇ ನೋಟೀಸನ್ನು ಕಳುಹಿಸಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯು ಅವಿದ್ಯಾವಂತರಾಗಿದ್ದು, ಸಹಿ ಮಾಡಲು ಬರುವುದಿಲ್ಲ, ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ ಅಂದರೆ ಸರಿಯಲ್ಲ. ನಿಪಿ-6 ದಾಖಲೆಯಲ್ಲಿರುವ ಸಹಿ ಪ್ರತಿವಾದಿಯದ್ದಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯಾಗಲೀ ಅವರ ಗಂಡ ಷರೀಫ್ ಆಗಲೀ ನಮಗೆ ಸೇರಿದ ಆಸ್ತಿಯಲ್ಲಿ ಬಾಡಿಗೆದಾರರಾಗಿ ಎಂದಿಗೂ ಇರಲಿಲ್ಲ ಅಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಕ್ರಯದ ಒಪ್ಪಂದದ ಕರಾರು ಪತ್ರಕ್ಕೆ ಹೆಬ್ಬೆಟ್ಟಿನ ಸಹಿ ಹಾಕಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಿ:21.05.1999 ರಿಂದ ನಾವು ದಾವಾ ಸ್ವತ್ತಿನ ಮಾಲೀಕರಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಖಾತೆ ನನ್ನ ಗಂಡನ ಹೆಸರಿನಲ್ಲಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರ:ದಿ:ನ್ಯಾ:ದಂ.,ರವರು, ಕಡೂರು.